## ಅಧ್ಯಾಯ - 3

# ನಾನು ಈಗ ದೇವರ ಮಾರ್ಗದಲ್ಲಿ ನಡೆಯುತಿದ್ದೇನೆ

## ಯೇಸುವನ್ನು ಹಿಂಬಾಲಿಸುವುದು

ಪ್ರತಿಯೊಬ್ಬ ನಿಜಕ್ರೈಸ್ತವನು. ಯೇಸುಕ್ರಿಸ್ತನ ಶಿಷ್ಯನಾಗಿದ್ದಾನೆ. ಈ ರೀತಿಯಾಗಿ ಯೇಸು ಕ್ರಿಸ್ತನ ಮಾರ್ಗದಲ್ಲಿ ನಡೆಯುತ್ತಾ ಆತನನ್ನು ಮುಂದೆ ಇಟ್ಟುಕೊಂಡು ಆತನನ್ನು ಅನುಸರಿಸಿ ಜೀವಿಸಬೇಕು.

> ''ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನು ನಡೆಯುವದಕ್ಕೆ ಬದ್ಧನಾಗಿದ್ದಾನೆ''
>
> ೧ ಯೋಹಾನ ೨ : ೬

ನೀವು ದೇವರನ್ನು ನಂಬಿದಾಗ ನಿನ್ನ ಜೀವನದಲ್ಲಿ ಬರುವ ಕಷ್ಟಗಳಾಗಲಿ, ದುಖ:ವಾಗಲಿ, ರೋಗವಾಗಲಿ ಇತರ ಯಾವ ಸಮಸ್ಯಗಳು ಬಂದರೂ ಯೇಸುಕ್ರಿಸ್ತನ ಸಮಾಧಾನವು ನಿನ್ನನ್ನು ಆಳುವುದು. ಆದುದರಿಂದ ಯೇಸುವನ್ನು ನಂಬಿ ಸಮಾಧಾನದಿಂದ ಇರುತ್ತೀಯ.

## ದೇವರನ್ನು ಮುಂದೆ ಇಡುವುದು

> ''ಹೀಗಿರುವದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತೆವಕಪಡಿರಿ. ಇವುಗಳಕೂಡ ಅವೆಲ್ಲವೂ ನಿಮಗೆ ದೊರಕುವವು''. ಮತ್ತಾಯ ೬ : ೩೩

ದೇವರನ್ನು ನಾವು ಅನುಸರಿಸಿ ನಡೆಯುತ್ತಿದ್ದೇವೆ. ಆದ್ದರಿಂದ ದೇವರು ನಮಗೆ

ಕೆಲವು ಜವಾಬ್ದಾರಿಗಳನ್ನು ಕೊಟ್ಟಿದ್ದಾನೆ. ಆತನು ನಮಗೆ ಕೊಟ್ಟಿರುವ ಕೆಲಸಗಳನ್ನು ತಿಳಿದು ಯೇಸುವನ್ನು ಸುತಿಸುತ್ತಾ ಆತನಿಗೆ ವಿಧೇಯರಾಗಿ ಇರಬೇಕೆಂದು ಆತನು ಕೋರುತ್ತಾನೆ. ಕ್ರಿಸ್ತನಲ್ಲಿ ನಡೆದು ಕ್ರೈಸ್ತವನಾಗಿ ನಡೆದು ಹೋಗುತ್ತಾ ದೇವರ ಚಿತ್ತವನ್ನು ತಿಳಿದು ವಿದೇಯರಾಗಿ ನಡೆಯ ಬೇಕು. ನಾವು ಸ್ವಾರ್ಥದಿಂದ ಜೀವಿಸುವುದಕ್ಕೆ ಅಲ್ಲ ದೇವರಲ್ಲಿಯೇ ನಮ್ಮ ವಿಧೇಯತೆಯನ್ನು ತೋರಿಸಿ ಮುಂದಕ್ಕೆ ಸಾಗುತ್ತಾ ಜೀವಿಸಬೇಕು.

''ಇದಲ್ಲದೆ ಆತನು ಎಲ್ಲರಿಗೂ ಹೇಳಿದ್ದೇನೆಂದರೆ ಯಾವನಿಗಾದರೂನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು''

ಯೇಸುಕ್ರಿಸ್ತನನ್ನು ಹಿಂಬಾಲಿಸುವಾಗ ನಮಗೆ ಎಷ್ಟೋ ಕಷ್ಟಗಳು, ಅಡ್ಡಿಗಳು ಬರುವುವು. ಆದರೆ ಯೇಸುವಿನಲ್ಲಿ ನಮಗೆ ವಿಶ್ರಾಂತಿ ಸಿಗುತ್ತದೆ. (ಮತ್ತಾಯ ೧೧ : ೨೮-೩೦ ರ ವರೆಗಿರುವ ವಚನೆಗಳನ್ನು ಓದಿರಿ). ನಿನ್ನ ಜೀವನದಲ್ಲಿ ಆತನ ಚಿತ್ತವನ್ನು, ಆತನ ಕೆಲಸವನ್ನು ನಿನ್ನನ್ನು ಕಾಪಾಡುತ್ತಿರುವ ಯೇಸುವಿನ ಮುಂದೆ ಇಟ್ಟರೆ, ದೇವರ ಪ್ರೀತಿಯುಳ್ಳ ಸಂಭಂಧವನ್ನು ನೀವು ಪೂರ್ಣವಾಗಿ ಹೊಂದುತ್ತಿ. ಈ ರೀತಿಯಾಗಿ ನಿನ್ನ ಅನುದಿನದ ಅವಸರಗಳನ್ನು ದೇವರು ತೀರಿಸುತ್ತಾರೆಂದು ನಂಬಬೇಕು (ಮತ್ತಾಯ ೬ : ೨೫-೩೪)

''ನನ್ನನ್ನು ಬಲಪಡಿಸುವಾತನಲ್ಲಿದ್ದುಕೊಂಡು ಎಲಕ್ಕೂ ಶಕ್ತನಾಗಿದ್ದೇನೆ'' (ಫಿಲಿಪ್ಪಿ ೪ : ೧೩)

ಪ್ರತಿದಿನವೂ ಯೇಸುವಿಗೆ ನಮ್ಮ ಜಿವನದ ಮೂಲಕವಾಗಿ ವಿಧೇಯತೆಯನ್ನು ತೋರಿಸಬೇಕು. ಜೀವನದ ಪರಿಸ್ಥಿತಿಗಳು ಪ್ರಪಂಚದ ಪರಿಸ್ಥಿತಿಗಳಿಗಿಂತ ದೊಡ್ಡದು. ಯೇಸುಕ್ರಿಸ್ತನು ಹೇಳಿದ ರೀತಿಯಲ್ಲಿ ನೀನು ನಡೆದಾಗ ಆತನು ನಿನ್ನನ್ನು ಧೈರ್ಯಗೊಳಿಸಿ ನಿನಗೆ ಬೇಕಾದ ಎಲ್ಲವನ್ನು ಕೊಡುವವನಾಗಿದ್ದಾನೆ.

**ದೇವರ ಮಾರ್ಗಗಳು ಆನಂದದಾಯಕವಾಗಿ ಕಲಿತುಕೊಳ್ಳಲು ಸಹಾಯಮಾಡುತ್ತದೆ.**

> ''ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ ನಿನ್ನ ನಮ್ಮುಖದಲ್ಲಿ ಪರಿಪೂರ್ಣ ಸಂತೇಷವಿದೆ. ನಿನ್ನ ಬಲಗೆಯಲ್ಲಿ ಶಾಶ್ವತ ಭಾಗ್ಯವಿದೆ.
>
> ಕೀರ್ತನೆ ೧೬ : ೧೧

ಒಬ್ಬ ಕ್ರೈಸ್ತವನಾಗಿ ನೀನು ನಿಜವಾದ ಸಂತೋಷವನ್ನು ಹೊಂದುತ್ತಿರುವಾಗ ಈ ಲೋಕದ ಪಾಪವು ನಿನ್ನನ್ನು ನಾಶಮಾಡುವುದಿಲ್ಲ. ಆದರೆ ದೇವರ ಸಂತೋಷವು ಎಂದೆಂದಿಗೂ ನಿನ್ನನ್ನು ಬಲಗೊಳಿಸುತ್ತಾ ಹೋಗುತ್ತದೆ.

**ದೇವರು ಯಾವುದು ಬಳೆಯದೋ ಆ ಮಾರ್ಗದಲ್ಲಿಯೇ ನಿನ್ನನ್ನು ನಡೆಸುವನು.**

ಯೇಸುಕ್ರಿಸ್ತನನ್ನು ನಂಬಿ ಕ್ರೈಸ್ತವನಾಗಿ ನೀನು ಯಾವುದೇ ರೀತಿಯಲ್ಲಿ ಸ್ವಂತವಾದ ನಿರ್ಣಯವನ್ನು ತೆಗೆದುಕೊಳ್ಳದೆ, ಪವಿತ್ರ ಆತ್ಮನು ನಿನಗೆ ಹೇಳಿದ ರೀತಿಯಲ್ಲಿ ನಿನ್ನನ್ನು ಸತ್ಯಮಾರ್ಗದಲ್ಲಿ ನಡೆಸುವನು ಮತ್ತು ನೀನು ದೇವರ ಪರಿಶುದ್ಧ ವಾಕ್ಯವನ್ನು ಓದುತ್ತಾ ಹೋದಂತೆ ಆ. ವಾಕ್ಯದ ಪ್ರಕಾರವಾಗಿ ನಡೆಯುತ್ತಾ ಯೇಸು ಕ್ರಿಸ್ತನು ನಡೆದುಕೊಂಡ ರೀತಿಯಲ್ಲಿ ನೀನು ನಡೆದುಕೊಳ್ಳಲು ಪ್ರಯತ್ನ ಮಾಡುತ್ತೀಯ. ಆ ರೀತಿ ಮಾಡದಿದ್ದರೆ ದೇವರ ಶಾಂತಿಯು ನಿನ್ನಲ್ಲಿ ಇರುವುದಿಲ್ಲ. (ಕೊಲಸ್ಸೆ ೩ : ೧೫)

> ''ಸ್ಯಬುದ್ಧಿಯನ್ನೇ ಆದಾರ ಮಾಡಿಕೊಳ್ಳುದೆ ಪೂರ್ಣ ಮನಸ್ಸಿನಿಂದ ಕರ್ತನಲ್ಲಿ ಭರವಸವಿಡು. ನಿನ್ನ ಎಲ್ಲಾ ನಡವಳಿಯಲ್ಲಿ ಆತನ ಬಿತ್ತಕ್ಕೆ ವಿಧೇಯನಾಗಿರು. ಆತನೇ ನಿನ್ನ ಮಾರ್ಗಗಳನ್ನು ಸರಾಗಮಾಡುವನು''
>
> (ಜ್ಞಾನೋಕ್ತಿ ೩ : ೫, ೬)

ನೀನು ಮಾಡುವ ಪ್ರತಿಯೊಂದು ಕೆಲಸದಲ್ಲಿ ಯೇಸು ಕ್ರಿಸ್ತನನ್ನು ಮುಂದೆ ಇಡು. ಒಂದು ವೇಳೆ ನಿನ್ನ ಜೀವನದಲ್ಲಿ ನಿನ್ನನ್ನು ಅವಮಾನ ಬರುವಂತಹ

ಸಂಧರ್ಭಗಳು ಬಂದರೆ, ಅದನ್ನು ಮರೆತುಬಿಟ್ಟು ದೇವರ ಚಿತ್ತದ ಪ್ರಕಾರ ದೇವರ ಕೆಲಸವನ್ನು ಮಾಡು ಆತನ ಆತ್ಮವನ್ನು ನಂಬಿದ್ದೇಯ. ಆತನನ್ನು ನಂಬಿದಾಗ ನಿನ್ನ ಪ್ರತಿಯೊಂದು ಸಮಸ್ಯೆಗಳನ್ನು ತೀರಿಸಲು ಆತನು ನಿನಗೆ ಸಹಾಯ ಮಾಡುವನು.

''ನನ್ನ ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು''

(ಫಿಲಿಪ್ಪಿ ೪ : ೧೯)

## ದೇವರು ನಮ್ಮನ್ನು ವಿಶ್ವಾಸದಿಂದ (ನಂಬಿಕೆಯಿಂದ) ಜೀವಿಸ ಬೇಕೆಂದು ಕೇಳುತ್ತಿದ್ದಾನೆ.

''ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವುದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೋಳ್ಳುವದೂ ಆಗಿದೆ''.

ನಂಬಿಕೆ ಎಂದರೆ ಕಾಣದೇ ಇರುವುದನ್ನು ಇದ್ದಹಾಗೆ ನಂಬುವುದು. ನಾವು ಏನು ನೋಡುತ್ತೇವೆಯೋ ಅದನ್ನು ನಂಬುವುದಲ್ಲ. ಯೇಸುಕ್ರಿಸ್ತನು ಹೇಳಿದ್ದನು ನಂಬಿಕೆಯಿಂದ ತಿಳಿಯುವುದೇ ನಂಬಿಕೆಯಾಗಿದೆ.

''ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ. ದೇವರ ಬಳಿಗೆ ಬರುವವನು ದೇವರ ಇದ್ದಾನೆ ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವುದು ಅವಶ್ಯ''

(ಇಬ್ರಿಯ ೧೧ : ೬)

## ನಾವು ಹೇಗೆ ನಂಬಿಕೆಯನ್ನು ಹೊಂದಬಲ್ಲೆವು ?

ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆದಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ (ರೋಮಾ ೧೦ : ೧೭)

ನಮಗೆ ನಂಬಿಕೆಯು ದೇವರ ವಾಕ್ಯದಿಂದ ಬರುವುದು. ಆದುದರಿಂದ ದೇವರು ಆ ಕೆಲಸವನ್ನು ಮಾಡುತ್ತಾರೆಂದು ನಂಬಿದರೆ, ದೇವರು ಆ ಕೆಲಸವನ್ನು

ಮಾಡುತ್ತಾನೆ. ಯೇಸು ಕ್ರಿಸ್ತನನ್ನು ನಿನ್ನ ಪೂರ್ಣ ಹೃದಯದಿಂದ ನಂಬಿದಾಗ ನೀನು ಹೊಸದಾಗಿ ಹುಟ್ಟುವೆ. ಹೀಗೆ ನಿನಗೆ ಯೋಸುಕ್ರಿಸ್ತನಲ್ಲಿ, ಪೂರ್ಣ ನಂಬಿಕೆಯು ಬರುವುದು.

''ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೋಸುಕ್ರಿಸ್ತ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ. ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು. ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ''. (ರೋಮ ೫ : ೧, ೨)

## ನಾವು ನಮ್ಮ ನಂಬಿಕೆಯನ್ನು ತೋರಿಸುವ ಮೂಲಕವಾಗಿ ಸಂತೋಷವಾಗಿದ್ದೇವೆಂದು ಹೇಳಬಲ್ಲೆವೋ ?

ದೇವರ ಮಕ್ಕಳಿಗೆ ಅಳಿಯದ ಐಶ್ವರ್ಯವು ಇದೆ. ದೇವರ ಐಶ್ವರ್ಯದ ಮೂಲವು ನಾವೇ. (ರೋಮ ೮ : ೧೭)

ಆ ಐಶ್ವರ್ಯವನ್ನು ದೇವರು ನಮಗೆ ಹಂಚಿಕೊಡಲು ಇಷ್ಟ ಪಟ್ಟಿದ್ದಾನೆ (ರೋಮ ೮ : ೩೨) ಪ್ರತಿಯೊಂದು ಬಳ್ಳೆಯ ವರವು ದೇವರಿಂದ ಬಂದಿದ್ದು. ದೇವರು ಅದನ್ನು ನಮಗೆ ಹಂಚಿಕೊಡುವ ಮೂಲಕ ನಾವು ದೇವರಿಗೆ ಕೃತಜ್ಞತಾ ಸ್ತುತಿಯನ್ನು ಸಲ್ಲಿಸಿ ದೇವರಲ್ಲಿ ಆನಂದಿಸಬೇಕು. ಸತ್ಯವೇದವು ಇದಕ್ಕೆ ಸರಿಯಾಗಿ ಹೇಳುವುದೇನಂದರೆ, ''ಆದರೆ ಸ್ವಲ್ಪವಾಗಿ ಬಿತ್ತುವವನ್ನು ಪೈರನು ಸ್ವಲ್ಪವಾಗಿ ಕೊಯ್ಯುವನು ಹೆಚ್ಚಾಗಿ ಬಿತ್ತುವವನು ಹೆಚ್ಚಾಗಿ ಕೊಯ್ಯುವನು ಎಂದು ತಿಳುಕೊಳ್ಳಿರಿ'' ೨ ಕೊರಿಂಥ್ಯ : ೬

ದೇವರು ನಮಗೆ ಕೊಡುವುದಕ್ಕಿಂತ ಹೆಚ್ಚಾಗಿ ನಾವು ದೇವರಿಗೆ ಹೆಚ್ಚೇನುಕೊಕಡುವುದಿಲ್ಲ.

## ನೀರಿನಿಂದ ತೆಗೆದುಕೊಳ್ಳುವ ದೀಕ್ಷಸ್ನಾನವನ್ನು ಕುರಿತು ಏನು ?

ಸಂಘವು ಆರಂಭಿಸಿದ ದಿನದಿಂದಲೂ ಯೇಸು ಕ್ರಿಸ್ತನನ್ನು ನಂಬಿದವರು ಆತನ

ವಾಕ್ಯದ ಪ್ರಕಾರ ನೀರಿನಲ್ಲಿ ಮುಳುಗು ವುದರ ಮೂಲಕ ದೀಕ್ಷಾಸ್ನಾನವನ್ನು ಹೊಂದಿದರು. (ಮಾರ್ಕ ೧೬ : ೧೬, ಅಪೊ.ಕೃ. ೨ : ೩೮, ೩೯)

ದೀಕ್ಷಾ ಸ್ನಾನ ಎಂದರೆ, ನೀರಿನಲ್ಲಿ ಪೂರ್ಣವಾಗಿ ಮುಳುಗಿ ಏಳುವುದು. ದೇವರ ವಾಕ್ಯದಲ್ಲಿ ಹೇಳಿರುವ ಪ್ರಕಾರ ಶರೀರ ಬಟ್ಟೆಯನ್ನು ಮುಳುಗಿಸುವುದು. ಹೇಗೆ ಕೊಳೆಯಾದ ಬಟ್ಟೆಯನ್ನು ನೀರಿನಲ್ಲಿ ಮುಳುಗಿಸಿದಾಗ ಅದರಲ್ಲಿರುವ ಕೊಳೆಯು ಹೋಗಿ ಬಟ್ಟೆ ಶುಭ್ರವಾಗುತ್ತದೋ ಅದೇ ರೀತಿಯಾಗಿ ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾ ಸ್ನಾನ ಮಾಡಿಸಿಕೊಂಡವರಾದ ನಾವು ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾ ಸ್ನಾನ ಮಾಡಿಕಿಕೊಂಡಿದ್ದೇವೆ. ಈ ರೀತಿಯಾಗಿ ನೀವು ದೇವರ ಆಜ್ಞೆಯನ್ನು ನೆರವೇರಿಸುವವಾನಾಗಿರುತ್ತೀ. ರೋಮಾ ೬ : ೧ -೧೧ ವಚನಗಳನ್ನು ಓದಿನಾಗ ನೀನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು.

- ದೀಕ್ಷಾಸ್ನಾನವು ನೀನು ಪಾಪದ ವಿಷಯದಲ್ಲಿ ಸತ್ತು ಸಮಾಧಿ ಮಾಡಲ್ಪಟ್ಟಿದ್ದೀಯೆಂದು ತಿಳಿಸುತ್ತದೆ.
- ದೀಕ್ಷಾಸ್ನಾನವು ನಮ್ಮ ಹಳೆಯ ಜೀವನ ಅಂದರೆ ಪಾಪದಿಂದ ಕೂಡಿದ ಜೀವನವನ್ನು ಅಳಿಸಿಹಾಕುತ್ತದೆ. ಆ ಮನುಷ್ಯನು ಹಳೇಯ ಜೀವನಕ್ಕೆ ಮುಕ್ತಾಯ ಹೇಳಿ ಹೊಸ ಜೀವನಕ್ಕೆ ನಾಂದಿ ಹೇಳುವುದು. (ಕೊಲಸ್ಸೆ ೨ : ೧೧, ೧೨)
- ಹೀಗೆ ದೀಕ್ಷಾಸ್ನಾನವು ಯೇಸುಕ್ರಿಸ್ತನಲ್ಲಿ ಹೊಸಜೀವನವನ್ನು ಪ್ರಾರಂಭಿಸಲು ಸಹಾಯಮಾಡುತ್ತದೆ. (ಹಲಾತ್ಯ ೨ : ೨೦)
- ಜೀವಿಸುವ ದೇವರೊಂದಿಗೆ ಅಂದರೆ, ತಂದೆ, ಮಗ, ಪವಿತ್ರ ಆತ್ಮನ ಸಹವಾಸವನ್ನು ನಿನ್ನಲ್ಲಿ ಸಾಗಿಸಿಕೊಂಡು ಹೋಗುವುದು (ಕೋಲಸ್ಸೆ ೩ : ೧-೪)
- ಅದು ನಾವು ಯೋಸುಕ್ರಿಸ್ತನು ನಮಗಾಗಿ ಶಿಲುಬೆಯಲ್ಲಿ ಮರಣ ಹೊಂದಿದನೆಂದು, ನಮ್ಮ ಪಾಪಕ್ಕಾಗಿ ಬಲಿಯಾದನೆಂದು ನಂಬುವಂತೆ

ಮಾಡುತ್ತದೆ. (ಅ. ಕೃ ೨೨ : ೧೬)

- ಆದಿ ಕ್ರೈಸ್ತರು ಮೊದಲಿನಿಂದಲೂ ನಂಬಿಕೆಯಿಂದ ಬಲವಾಗಿ ಜೀವಿಸುತ್ತಾ ಬಂದರು (೧ಕೊರಿಂಥ ೧೫ : ೩ - ೭)
- ನಾವು ಹಳೆಯ ಜೀವನದ ಸ್ವಭಾವಗಳನ್ನು ಮರೆತು ಬಿಟ್ಟು ಹೊಸ ಸ್ವಭಾವವನ್ನು ದರಿಸಿ ಆತನಲ್ಲಿ ಜೀವಿಸುವುದು. (೨ ಕೊರಿಂಥ ೫ : ೧೭)
- ಈ ರೀತಿಯಾಗಿ ಯೇಸುಕ್ರಿಸ್ತನು ಆಜ್ಞಾಪಿಸಿದ ಪ್ರಕಾರವಾಗಿ ನೆರವೇರಿಸುತ್ತಾ ಆತನ ಶಿಷ್ಯರಾಗಿ, ವಿಧೇಯರಾಗಿ ಜೀವನ ಸಾಗಿಸುವುದೇ ದೇವರ ಚಿತ್ತವಾಗಿದೆ. (ಮತ್ತಾಯ ೨೮ : ೧೯)

ದೀಕ್ಷಾ ಸ್ನಾನವು ನೀನು ಯೇಸುಕ್ರಿಸ್ತನಲ್ಲಿ ನಂಬಿಕೆ ಇಟ್ಟು ತಂದೆ-ಮಗ-ಪವಿತ್ರಾತ್ಮನಲ್ಲಿ ನಿನಗೆ ಆತನು ಮಾಡಿದ ಉಪಕಾರಗಳನ್ನು ಸ್ಮರಿಸಿ ಸಂಘದಲ್ಲಿ ಕ್ರಮವಾಗಿ ಬರುತ್ತಾ ದೇವರ ಮಕ್ಕಳಿಂದ ಬಲಹೊಂದಬೇಕು.

## ಪ್ರಶ್ನೆಗಳು ಮತ್ತು ವಿಷಯಗಳು :

೧. ಯೊಹಾನ ೮ : ೩೧, ೩೨ ಮತ್ತು ಕೊಲಸ್ಸೆ ೩ : ೧೭ ರ ಪ್ರಕಾರ ನಾವು ಯೇಸು ಕ್ರಿಸ್ತನ ಶಿಷ್ಯರಾಗಿ ಹೇಗೆ ಇರಬಹುದು.

೨. ನಮ್ಮ ಜೀವನ ಮೂಲಕ ನಾವು ಇತರರಿಗೆ ಹೇಗೆ ಇರಬಹುದು ? (ಮತ್ತಾಯ ೫ : ೧೬)

೩. ಈ ಕೆಳಗಿನ ವಚನಗಳು ಯೇಸು ಕ್ರಿಸ್ತನಲ್ಲಿ ನಮಗೆ ಏನನ್ನು ಹೇಳುತ್ತದೆ ? ೨ ಕೊರಿಂಥ ೫ : ೧೭ ಕೊಲಸ್ಸೆ ೨ : ೯ , ೧೦, ೩ : ೯, ೧೦)

೪. ದೇವರ ಪ್ರೀತಿಯಿಂದ ನಮ್ಮನು ಬೇರೆ ಮಾಡುವವರಾರು ಇದ್ದಾರೊ?

(ರೋಮಾ ೮ : ೩೮, ೩೯)

೫. ನಾವು ದೇವರ ಮಕ್ಕಳೆಂದು ಪವಿತ್ರ ಆತ್ಮ ಹೇಗೆ ತಿಳಿಸುತ್ತಾನೆ ? (ರೋಮಾ ೮ : ೧೪-೧೭)

೬. ಒಬ್ಬ ವಿಶ್ವಾಸಿಗೆ ಇರುವ ಮುಖ್ಯ ಗುರಿ ಏನು ? (೧ ಕೊರಿಂಥ ೧೩ : ೧-೩)

೭. ನಿಮ್ಮನು ಧೈರ್ಯಗೊಳಿಸುವ ಈ ವಾಕ್ಯಗಳನ್ನು ಓದಿರಿ.
(ಎಫೆಸ ೨ : ೬ - ೧೦, ೨ ಪೇತ್ರ ೧ : ೩)

## ಪ್ರಾರ್ಥನೆ :

ಸರ್ವ ಶಕ್ತನಾದ ಯೇಸುಕ್ರಿಸ್ತನೇ ನಿನ್ನ ವಾಕ್ಯದ ಪ್ರಕಾರ ಜೀವಿಸಿ ನೀನು ನನಗೆ ಕೊಟ್ಟವರಗಳ ಮೂಲಕ ನಾನು ಇತರರಿಗೆ ಬೆಳಕಾಗಿ, ಸಾಕ್ಷಿಯಾಗಿ ಜೀವಿಸಲು, ಫಲಗಳನ್ನು ಹೊಂದುವ ಮಗನಾಗಿ ಜೀವಿಸಲು ನನಗೆ ಸಹಾಯ ಮಾಡುತ್ತೀಯೆಂದು ನಂಬಿ ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸುಸುತ್ತೇನೆ. ಆಮೆನ್.